**ಕರ್ನಾಟಕ ಸರ್ಕಾರ**
**ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು – 560 009.**

ಸಂಖ್ಯೆ: ಕಪಂರಾಆ/ಅಭಿ/ಗ್ರಂಥಾಲಯ/25/2023 ದಿನಾಂಕ: 30-01-2023

## ಸುತ್ತೋಲೆ

**ವಿಷಯ:** ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ **ಸೂಚನಾ/ಪ್ರಕಟಣಾ /ಪ್ರದರ್ಶನ ಮತ್ತು ನಾಮ ಫಲಕ**ವನ್ನು ಅಳವಡಿಸುವ ಕುರಿತು.

*****

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ಭಾಗದ ಮಕ್ಕಳಿಗೆ ಓದಲು ಮತ್ತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು, ಮಹಿಳೆಯರಿಗೆ/ ಪುರುಷರಿಗೆ/ಹಿರಿಯ ನಾಗರಿಕರಿಗೆ ತಮ್ಮ ಸಮಯವನ್ನು ಉಪಯುಕ್ತವಾಗಿ ಓದಿನಲ್ಲಿ ಮತ್ತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು **"ಓದುವ ಬೆಳಕು"** ಕಾರ್ಯಕ್ರಮವನ್ನು ಪ್ರಾರಂಭಿಸಿದೆ.

**"ಓದುವ ಬೆಳಕು"** ಕಾರ್ಯಕ್ರಮದ ಅಂಗವಾಗಿ ಈಗಾಗಲೇ ರಾಜ್ಯದ ಬಹುತೇಕ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಸೃಜನಾತ್ಮಕವಾಗಿ ಮತ್ತು ಮಕ್ಕಳಿಗೆ ಆಕರ್ಷಣೀಯವಾಗಿ ಅಭಿವೃದ್ಧಿಪಡಿಸಿರುವುದು ಮತ್ತು ಗ್ರಾಮೀಣ ಭಾಗದ ಎಲ್ಲಾ ಸಮುದಾಯದವರು ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ತಮ್ಮ ಸಮಯವನ್ನು ಓದಿನಲ್ಲಿ ಮತ್ತು ಕಲಿಕೆಯಲ್ಲಿ ತೊಡಗಿಸಿ ಕೊಳ್ಳುತ್ತಿರುವುದನ್ನು ರಾಜ್ಯ/ ಕೇಂದ್ರ ಸರ್ಕಾರವು ಮತ್ತು ಅನೇಕ ಸಂಘ ಸಂಸ್ಥೆಗಳು ಗುರುತಿಸಿ ವಿವಿಧ ವೇದಿಕೆಗಳಲ್ಲಿ ಅಭಿನಂದಿಸಲಾಗುತ್ತಿದೆ.

ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಇನ್ನೂ ಹಲವಾರು ರೀತಿಯಾಗಿ ಗ್ರಂಥಾಲಯಗಳಿಗೆ ಪ್ರವೇಶಿಸಲು ಮತ್ತು ತೊಡಗಿಸಿಕೊಳ್ಳಲು ಹೊಸ ಮಾರ್ಗಗಳನ್ನು ಪರಿಚಯಿಸುತ್ತಾ ಗ್ರಾಮೀಣ ಭಾಗದ ಮಕ್ಕಳಿಗೆ/ಮಹಿಳೆಯರಿಗೆ/ಪುರುಷರಿಗೆ/ಹಿರಿಯ ನಾಗರೀಕರುಗಳಿಗೆ/ಸಮುದಾಯಗಳಿಗೆ ಸರ್ಕಾರದ ಯೋಜನೆಗಳು/ಆಶಯಗಳು, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಆಯೋಜಿಸುವ ವಿವಿಧ ಚಟುವಟಿಕೆಗಳ ಮಾಹಿತಿಗಳು ಮತ್ತು ಇತರೆ ಯೋಜನೆಗಳು ಇನ್ನು ಹೆಚ್ಚಿನದಾಗಿ ತಲುಪಲು ಈ ಕೆಳಗಿನವುಗಳನ್ನು ಪಾಲಿಸುವಂತೆ ಈ ಮೂಲಕ ನಿರ್ದೇಶಿಸಲಾಗಿದೆ.

ಈಗಾಗಲೇ ಹಲವಾರು ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ ವಿವಿಧ ಬಗೆಯ ನಾಮಫಲಕಗಳನ್ನು ಅಳವಡಿಸಿರುವುದು ನಮ್ಮ ಗಮನಕ್ಕೆ ತಿಳಿದುಬಂದಿದೆ, ಇನ್ನುಮುಂದೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ "**ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ** " ಎಂಬ ನಾಮಫಲಕವನ್ನು ಜನಸಾಮಾನ್ಯರಿಗೆ ಕಾಣುವಂತೆ ಅಳವಡಿಸುವುದು/ ಪೇಂಟಿನಲ್ಲಿ ಬರೆಸುವುದು.

- ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ 2/3 ಅಥವಾ 3/4 ಅಡಿ ಅಳತೆಯ ಸೂಚನಾ / ಪ್ರಕಟಣಾ / ಪ್ರದರ್ಶನ ಫಲಕವನ್ನು ಅಳವಡಿಸುವುದು.
- ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಅಳವಡಿಸುವ ಸೂಚನಾ / ಪ್ರಕಟಣಾ/ ಪ್ರದರ್ಶನ ಫಲಕದಲ್ಲಿ ಈ ಕೆಳಗಿನವುಗಳನ್ನು ಪ್ರದರ್ಶಿಸುವುದು;
- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಿವಿಧ ಇಲಾಖೆಗಳ ಯೋಜನೆಗಳು ಮುದ್ರಣಗೊಂಡ IEC ಪರಿಕರಗಳನ್ನು ಪ್ರದರ್ಶಿಸುವುದು.
- ಗ್ರಾಮ ಪಂಚಾಯಿತಿಯ ಇತ್ತೀಚಿನ ಸಭೆಗಳ ನಡವಳಿಗಳು, ಕ್ರಿಯಾಯೋಜನೆಗಳು, ಲಿಂಕ್ ಡಾಕ್ಯೂಮೆಂಟ್‌ಗಳು, ಗ್ರಾಮಸಭೆಗಳ ನಡವಳಿಗಳನ್ನು ಪ್ರದರ್ಶಿಸುವುದು.
- ಗ್ರಾಮೀಣ ಭಾಗದ ಮಕ್ಕಳಿಗೆ/ ಯುವಕ/ ಯುವತಿಯರಿಗೆ ಅನುಕೂಲವಾಗಲು UPSC/ KPSC/SSC/Defense/ವೈದ್ಯಕೀಯ/ ಇಂಜಿನಿಯರಿಂಗ್ ಸಂಬಂಧಿಸಿದ ಮತ್ತು ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿಗಳನ್ನು ಪ್ರಕಟಿಸುವುದು.
- ವಿವಿಧ ಇಲಾಖೆಗಳು ಪ್ರಕಟಿಸಲಾಗುವ ಪ್ರಕಟಣೆಗಳನ್ನು ಪ್ರದರ್ಶಿಸುವುದು.

- Admissions notifications for JNV schools, KREIS schools, hostels, etc
- Any other achievements by local residents or library users such as winning chess or karate tournament, sports or other contests, being successful in getting jobs, etc.
- Any artwork or poem, essay etc written by child or other library users

ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಸೂಚನಾ / ಪ್ರಕಟಣಾ / ಪ್ರದರ್ಶನ ಮತ್ತು ನಾಮ ಫಲಕವನ್ನು ಅಳವಡಿಸಲು ತಗಲುವ ವೆಚ್ಚವನ್ನು ಗ್ರಾಮ ಪಂಚಾಯಿತಿಗಳಿಂದ ಸಂಗ್ರಹಿಸಲಾಗುವ ಗ್ರಂಥಾಲಯ ಉಪಕರ ಅಥವಾ/ಮತ್ತು ಗ್ರಾಮ ಪಂಚಾಯಿತಿಯ ಸ್ವಂತ ನಿಧಿಯಿಂದ ಭರಿಸುವುದು.

**(ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳಿಂದ ಟಿಪ್ಪಣಿ ಅನುಮೋದಿಸಲ್ಪಟ್ಟಿದೆ.)**

ಆಯುಕ್ತರು,
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು,(ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು,(ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಂಥಾಲಯಗಳಿಗೆ (ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ)
5. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ರವರಿಗೆ ಸೂಕ್ತ ಬೆಂಬಲ ಮತ್ತು ಸಹಕಾರ ನೀಡಲು ಕ್ರಮವಹಿಸುವುದು.
6. ಮಾಹಿತಿ ಕೇಂದ್ರ/ವೆಬ್‌ಸೈಟ್, ಗ್ರಾಅಪ ಇಲಾಖೆ.

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.-560 001
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
4. ಕಛೇರಿ ಪ್ರತಿ.